# ಧರ್ಮಚಿಂತನೆ

❑ ವಿದ್ವಾನ್ ಮಧುಸೂದನ ಭಟ್

**ಧರ್ಮದ ಆವಶ್ಯಕತೆಯನ್ನೂ ಅದರ ಸೂಕ್ಷ್ಮವನ್ನೂ ಅದರ ವಿವಿಧ ಮುಖಗಳನ್ನೂ ವಿವರಿಸಿರುವ ವಿದ್ವಾನ್ ಮಧುಸೂದನ ಭಟ್ ಉಡುಪಿಯ ಉಪೇಂದ್ರ ಪೈ ಮೆಮೋರಿಯಲ್ ಕಾಲೇಜಿನಲ್ಲಿ ಸಂಸ್ಕೃತ ಉಪನ್ಯಾಸಕರಾಗಿರುವರು.**

ಆಹಾರನಿದ್ರಾ ಭಯಮೈಥುನಂ ಚ
ಏಭಿರ್ಮನುಷ್ಯೋ ಪಶುಭಿಸ್ಸಮಾನಃ ।
ಧರ್ಮೋ ಹಿ ತೇಷಾಮಧಿಕೋ ವಿಶೇಷಃ
ಧರ್ಮೇಣ ಹೀನಾಃ ಪಶುಭಿಸ್ಸಮಾನಾಃ ॥

"ಆಹಾರ, ನಿದ್ರೆ, ಭಯ ಹಾಗೂ ಸಂತಾನೋತ್ಪತ್ತಿಗಳಲ್ಲಿ ಮನುಷ್ಯನು ಪಶುಗಳಿಗಿಂತ ಭಿನ್ನನಲ್ಲ. ಮನುಷ್ಯನನ್ನು ಪ್ರಾಣಿಗಳಿಗಿಂತ ಪ್ರತ್ಯೇಕೀಕರಿಸುವ ಗುಣವೊಂದಿದ್ದರೆ ಅದು ಧರ್ಮ. ಅಂತಹ ಧರ್ಮಾಚರಣೆಯು ಮನುಷ್ಯನಲ್ಲಿ ಇಲ್ಲದಿದ್ದರೆ ಅವನಿಗೂ ಪಶುವಿಗೂ ಅಂತರವಿಲ್ಲ" ಎಂಬುದನ್ನು ಈ ಶ್ಲೋಕವು ಸಾರಿ ಹೇಳುತ್ತಿದೆ. ಧರ್ಮವೊಂದೇ ಮಾನವನ ಆಪ್ತಮಿತ್ರ. ಆಪ್ತರೆನಿಸಿದ ಎಲ್ಲ ಬಂಧುಮಿತ್ರರು ಪಾರ್ಥಿವ ಶರೀರಕ್ಕೆ ಕೊಳ್ಳಿ ಇಡುವವರೆಗೆ ಮಾತ್ರ. ಆಮೇಲೆ ಅವರವರ ದಾರಿ ಅವರವರಿಗೆ. ಆದರೆ ಸತ್ತ ಅನಂತರವೂ ಆತ್ಮನ ಜೊತೆಗೆ ಬರುವುದಾದರೆ ಅದು ಧರ್ಮ. ಜೀವಿತ ಕಾಲದಲ್ಲಿ ಮಾಡಿದ ಧರ್ಮವು ಮರಣಾನಂತರವೂ ಅವನ ಸಹವರ್ತಿಯಾಗಿರುತ್ತದೆ. ಆದ್ದರಿಂದ ಜೀವಿತದ ಪ್ರತಿ ದಿನವೂ ಧರ್ಮವನ್ನು ಆಚರಿಸಬೇಕು. ಜೀವನಪೂರ್ತಿ ಭೋಗದ ಬಾಳನ್ನು ನಡೆಸಿ, ಕೊನೆಯ ದಿನಗಳಲ್ಲಿ ಧರ್ಮಾಚರಣೆ ಸಾಧ್ಯವಿಲ್ಲ. ಜೀವಿತ ಕಾಲದಲ್ಲಿ ನಾವು ಬಾಳಿದ ರೀತಿಯ ಸ್ಮರಣೆಯೇ ಅಂತ್ಯಕಾಲದಲ್ಲೂ ಬರುವುದು. ಉದಾಹರಣೆಗೆ ವೃದ್ಧನೊಬ್ಬ ಹಾಸಿಗೆಯಲ್ಲಿ ಮಲಗಿದ್ದಾನೆಂದುಕೊಳ್ಳೋಣ. ಸುತ್ತಲಿನ ಬಂಧುಗಳು ಕೊನೆಯ ಉಸಿರನ್ನು ನಿರೀಕ್ಷಿಸುತ್ತಿದ್ದಾರೆ. ಇದ್ದಕ್ಕಿದ್ದಂತೆ ಹಾಸಿಗೆಯಿಂದ ಏಳುವ ಪ್ರಯತ್ನ. ಏನನ್ನೋ ಹೇಳುವ ತವಕ. ಆದರೆ ಹೇಳುವ ಪರಿಸ್ಥಿತಿಯಲ್ಲಿಲ್ಲ. ಕೈಸನ್ನೆಯಿಂದಲೇ ಹೇಳಿದ ಮಾತನ್ನು ಮಗನು ಅರ್ಥೈಸಿದ. ಪಕ್ಕದಲ್ಲಿದ್ದ ದೀಪವು ಜೋರಾಗಿ ಉರಿಯುತ್ತಿದ್ದು, ಅದರಿಂದ ಎಣ್ಣೆಯು ವ್ಯರ್ಥವಾಗುತ್ತಿದೆ, ಆ ದೀಪವನ್ನು ಚಿಕ್ಕದು ಮಾಡು ಎಂಬುದು ಆ ವೃದ್ಧನ ಸಲಹೆಯಾಗಿತ್ತು. ಜೀವನಪೂರ್ತಿ ಲೋಭದ ಬಾಳನ್ನೇ ಅನುಭವಿಸಿದ ವೃದ್ಧನಿಗೆ ಕೊನೆಯ ಕ್ಷಣದಲ್ಲಿ ಅದೇ ಸಂಸ್ಕಾರ ನೆನಪಿಗೆ ಬಂತು. ಆದ್ದರಿಂದ ಕೊನೆಯ ದಿನಗಳಲ್ಲಿನ ಧರ್ಮಾಚರಣೆಗೆ, ಪ್ರಾರಂಭದಿಂದಲೂ ಧರ್ಮದ ಬದುಕು ಅತ್ಯವಶ್ಯ.

ಮಾನವನ ಬದುಕು ತುಂಬ ಕ್ಷಣಿಕ. ಇಂದಿನ ಮನುಷ್ಯನನ್ನು ನಾಳೆ ಕಾಣುವ ಧೈರ್ಯವಿಲ್ಲ. **ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್**—"ಮೃತ್ಯುದೇವತೆ ಕೂದಲನ್ನು ಎಳೆಯುತ್ತಿದ್ದಾನೆ ಎಂದು ಭಾವಿಸಿ ಧರ್ಮಾಚರಣೆ ಮಾಡಬೇಕು" ಎಂದು ಸುಭಾಷಿತಕಾರನು ಹೇಳುತ್ತಾನೆ. ಧರ್ಮದ ಬಗೆಗೆ ಮುಂದೂಡಿಕೆ ಸರ್ವಥಾ ಸಲ್ಲದು. ಪಾಂಡವರು ರಾಜ್ಯವಾಳುತ್ತಿದ್ದ ಕಾಲ. ಬ್ರಾಹ್ಮಣನೊಬ್ಬ ದಾನವನ್ನು ಅಪೇಕ್ಷಿಸಿ ಯುಧಿಷ್ಠಿರನಲ್ಲಿ ಬರುತ್ತಾನೆ. ಸಾಯಂ ಕಾಲದ ಸಮಯವಾದ್ದರಿಂದ ಧರ್ಮರಾಜನು ಮರುದಿನ ಬರುವಂತೆ ಸೂಚಿಸುತ್ತಾನೆ. ಆದರೆ ಆ ಕ್ಷಣದಲ್ಲೇ ಅವನಿಗೆ ಹಣವು ಅನಿವಾರ್ಯವಾಗಿತ್ತು. ಭೀಮನಲ್ಲಿಗೆ ಬರುತ್ತಾನೆ. ಕೂಡಲೇ ಭೀಮನು ತನ್ನ ಕೈಯ ಬಂಗಾರದ ಕಡಗವನ್ನು ಕೊಡುತ್ತಾನೆ. ಹಾಗೆಯೇ ಸಂತೋಷಸೂಚಕ ನಗಾರಿಯನ್ನು ಬಾರಿಸುವಂತೆ ಹೇಳುತ್ತಾನೆ. ಯುಧಿಷ್ಠಿರನಿಗೆ ಆಶ್ಚರ್ಯ! ತನಗೂ ಗೊತ್ತಿರದ ಸಂತೋಷದ ವಿಚಾರ ಯಾವುದು? ಇದು ಅವನ ಜಿಜ್ಞಾಸೆ. ಭೀಮನು ಕೂಡಲೇ ಉತ್ತರಿಸಿದ: "ಬ್ರಾಹ್ಮಣನಿಗೆ ನಾಳೆ ಬರುವಂತೆ ಸೂಚಿಸಿ ನಾಳೆಯವರೆಗಿನ ಶಾಶ್ವತ ಬದುಕಿನ ಆತ್ಮವಿಶ್ವಾಸವನ್ನು ನೀನು ತಾಳಿರುವೆ. ಆ ಸಂತೋಷಕ್ಕೆ ನಾನೇ ನಗಾರಿಯನ್ನು ಬಾರಿಸುವ ವ್ಯವಸ್ಥೆ ಮಾಡಿದೆ." ಇಲ್ಲಿ ಸಂತೋಷದ ಜೊತೆಗೆ ಕ್ಷಣಿಕವಾದ ಬದುಕಿನಲ್ಲಿ ನಾಳೆಯವರೆಗಿನ ವಿಶ್ವಾಸ ಸಲ್ಲದು ಎಂಬುದಾಗಿ ಭೀಮನು ಮಾರ್ಮಿಕವಾಗಿ ಸೂಚಿಸಿರುವುದು ಎಷ್ಟು ಅರ್ಥಪೂರ್ಣವಾಗಿದೆ!

> ನ ತತ್ ಪರಸ್ಯ ಸಂದಧ್ಯಾತ್ ಪ್ರತಿಕೂಲಂ ಯದಾತ್ಮನಃ ।
> ಏತದ್ಧರ್ಮಮಿತಿ ಪ್ರೋಕ್ತಂ ಕಾಮಾದನ್ಯತ್ರ ವರ್ತತೇ ॥
>
> "ತನಗೆ ಪ್ರತಿಕೂಲವಾದುದನ್ನು ಇತರರಿಗೆ ಉಂಟುಮಾಡಬಾರದು. ಇದೇ ಧರ್ಮ. ಉಳಿದುದೆಲ್ಲ ಆಸೆಗಳಿಂದ ಪ್ರೇರಿತವಾದುದು."

ಈ ಧರ್ಮವು ಬಹಳ ಸೂಕ್ಷ್ಮ. ಕೆಲವೊಮ್ಮೆ ಧರ್ಮದಂತೆ ಕಂಡದ್ದೂ ಅಧರ್ಮವಾಗಬಹುದು, ಅಧರ್ಮದಂತೆ ಕಂಡದ್ದೂ ಧರ್ಮವಾಗಬಹುದು. ದ್ರೋಣಾಚಾರ್ಯರ ಸಂಹಾರಕ್ಕಾಗಿ ಕೃಷ್ಣನ **ಅಶ್ವತ್ಥಾಮಾ ಹತಃ** ಎಂಬ ಸುಳ್ಳುನುಡಿಯ ಮೇಲೆ ಯುಧಿಷ್ಠಿರನು ಧರ್ಮಚಿಂತನೆ ನಡೆಸುತ್ತಾನೆ. ಅದರ ಫಲವಾಗಿ ಸ್ವರ್ಗಕ್ಕೆ ಹೋಗುವಾಗ ಅವನಿಗೆ ನರಕದರ್ಶನದ ಅನಿವಾರ್ಯತೆ ಬಂದೊದಗುತ್ತದೆ. ಹಾಗಾದರೆ ಕೃಷ್ಣನ ಸುಳ್ಳುನುಡಿಯ ಮೇಲೆ ಧರ್ಮಜನು ಧರ್ಮಚಿಂತನೆ ನಡೆಸಿದ್ದೂ ಅಧರ್ಮವಾಯಿತೇ? ಅಂದಮೇಲೆ ಧರ್ಮ ಯಾವುದು? ಆ ಸಂದರ್ಭದಲ್ಲಿ ಶ್ರೀಕೃಷ್ಣನ ನುಡಿಯು ತೋರಿಕೆಗೆ ಅಧರ್ಮದಂತೆ ಕಂಡರೂ ಯಥಾರ್ಥವಾಗಿ ಧರ್ಮವೇ ಆಗಿದೆ. ದ್ರೋಣರ ಸಂಹಾರವಾಗದೆ ಕೌರವರ ನಾಶ ಇಲ್ಲ. ಕೌರವರ ನಾಶವಿಲ್ಲದೆ ದುಷ್ಟಸಂಹಾರವಿಲ್ಲ. ದುಷ್ಟಸಂಹಾರ ಹೊರತಾಗಿ ಧರ್ಮಸಂಸ್ಥಾಪನೆ ಅಸಾಧ್ಯ. ಅದಕ್ಕಾಗಿ ದ್ರೋಣರ

ಸಂಹಾರದ ಅನಿವಾರ್ಯತೆಗೆ ಕೃಷ್ಣನು ಧರ್ಮಜನ ಮೂಲಕ ನುಡಿಸಿದ ಮಾತು ಧರ್ಮವೇ ಆಗಿದೆ.

ಕರ್ಣನಿಂದ ಚೆನ್ನಾಗಿ ಹೊಡೆತ ತಿಂದ ಧರ್ಮಜನು ಕರ್ಣನನ್ನು ಸಂಹರಿಸುವುದರಲ್ಲಿ ವಿಫಲನಾದ ಬಗ್ಗೆ ಅರ್ಜುನನನ್ನು ಬೈದು ಅವನ ಗಾಂಡೀವ ಧನುಸ್ಸನ್ನು ಕೆಳಗಿಡುವಂತೆ ಲೇವಡಿ ಮಾಡುತ್ತಾನೆ. ಗಾಂಡೀವದ ಬಗ್ಗೆ ಅಗೌರವದ ಮಾತನ್ನಾಡಿದರೆ ಅವರನ್ನು ಕೊಲ್ಲುವುದಾಗಿ ಅರ್ಜುನನ ಪ್ರತಿಜ್ಞೆ. ಅದರಂತೆ ಧರ್ಮಜನನ್ನು ಕೊಲ್ಲಲು ಉದ್ಯುಕ್ತನಾದ ಅರ್ಜುನನನ್ನು ಶ್ರೀಕೃಷ್ಣನು ತಡೆದು "ಇನ್ನೊಬ್ಬರನ್ನು ಕೊಲ್ಲಬೇಕಾದರೆ ದೈಹಿಕ ಹಿಂಸೆಯನ್ನೇ ನೀಡಬೇಕಿಲ್ಲ. ಅವರನ್ನು ಚೆನ್ನಾಗಿ ನಿಂದಿಸಿ ಮಾನಸಿಕ ಹಿಂಸೆಯನ್ನು ನೀಡಿದರೂ ಅವರನ್ನು ಹತ್ಯೆ ಮಾಡಿದಂತೆಯೇ ಆಗುವುದು. ಅದರಂತೆ ಅಣ್ಣ ಧರ್ಮಜನನ್ನು ಕಟುಮಾತುಗಳಿಂದ ನಿಂದಿಸು" ಎಂಬ ಸಲಹೆಯನ್ನು ನೀಡುವನು. ಧರ್ಮಜನನ್ನು ಚೆನ್ನಾಗಿ ಜರಿದ ಅರ್ಜುನನು ಈ ಪಾಪದ ಪ್ರಾಯಶ್ಚಿತ್ತಕ್ಕಾಗಿ ತನ್ನನ್ನೇ ಕೊಂದುಕೊಳ್ಳಲು ತೊಡಗುವನು. ಕೃಷ್ಣನು ಪುನಃ ಅವನನ್ನು ತಡೆದು "ಕೊಲ್ಲುವ ಬದಲು ಅಹಂಕಾರದಿಂದ ಮಿತಿಮೀರಿ ತನ್ನನ್ನು ಹೊಗಳಿಕೊಂಡರೆ ಅದೇ ಆತ್ಮಹತ್ಯೆ ಎನಿಸುತ್ತದೆ. ಆದ್ದರಿಂದ ಆತ್ಮಪ್ರಶಂಸೆ ಮಾಡಿಕೊ" ಎಂದು ಸೂಚಿಸುತ್ತಾನೆ. ಅದರಂತೆ ಧರ್ಮಜನ ಮುಂದೆ ಅರ್ಜುನನು ತನ್ನನ್ನು ತಾನು ಅತಿಯಾಗಿ ಹೊಗಳಿಕೊಳ್ಳುತ್ತಾನೆ. ಹೀಗೆ ಇಲ್ಲಿ ಶ್ರೀಕೃಷ್ಣನು ನೀಡಿದ ಕೊಲೆ, ಆತ್ಮಹತ್ಯೆ ಇತ್ಯಾದಿ ಶಬ್ದಗಳ ವ್ಯಾಖ್ಯಾನ ಧರ್ಮಪರವಾಗಿದೆ. ಈ ನಿಟ್ಟಿನಲ್ಲಿ **ತದ್ಧರ್ಮಃ ಯತ್ಸತಾಂ ಧಾರಕಃ**—"ಸಜ್ಜನರಿಗೆ ಯಾವುದು ಧಾರಕವೋ ಅದು ಧರ್ಮ."

> ನ ತತ್ತ್ವವಚನಂ ಸತ್ಯಂ ನಾತತ್ತ್ವವಚನಂ ಮೃಷಾ ।
> ಯದ್ಭೂತಹಿತಮತ್ಯಂತಂ ತದ್ಧಿ ಸತ್ಯಂ ಪ್ರಕೀರ್ತಿತಮ್ ॥
>
> **ಇದ್ದದ್ದನ್ನು ಇದ್ದಂತೆ ಹೇಳುವುದು ಮಾತ್ರವೇ ಸತ್ಯವಲ್ಲ. ಇದ್ದದ್ದನ್ನು ಇದ್ದಂತೆ ಹೇಳದಿರುವುದು ಮಾತ್ರವೇ ಅಸತ್ಯವಲ್ಲ. ಯಾವುದು ಜೀವಿಗಳಿಗೆ ಅತ್ಯಂತ ಹಿತವಾಗಿರುವುದೊ ಅದೇ ಸತ್ಯ ಎಂದು ಹೇಳಲ್ಪಟ್ಟಿದೆ.**

## ಕ್ಷಾತ್ರಧರ್ಮ ಪಾಲನೆ

ಶರಣಾಗತ ರಕ್ಷಣೆ ಕ್ಷಾತ್ರಧರ್ಮ. ರಾವಣನ ಪಕ್ಷದಿಂದ ಬಂದು ವಿಭೀಷಣನು ಶರಣಾಗಿದ್ದಾನೆ. ರಾಕ್ಷಸರು ಮಾಯಾವಿಗಳು, ಕ್ಷಣಕ್ಕೊಂದು ರೂಪ ತೊಡುವವರು, ಆದ್ದರಿಂದ ವಿಭೀಷಣನಿಗೆ ರಕ್ಷಣೆ ಸರ್ವಥಾ ಸಲ್ಲದು—ಇದು ವಾನರ ರಾಜನಾದ ಸುಗ್ರೀವನ ಸಲಹೆ. ಆಗ ಶ್ರೀರಾಮನು ಒಂದು ಕಥೆಯ ಮೂಲಕ ಶರಣಾಗತ ರಕ್ಷಣೆ ಎಂಬ ಧರ್ಮವನ್ನು ಪಾಲಿಸಿದ ರೀತಿ ಅನನ್ಯವಾಗಿದೆ. "ಹುಲಿಯೊಂದು ಬೇಡನನ್ನು ಹಿಂಬಾಲಿಸುತ್ತಿದೆ. ಓಡುತ್ತ ಬಂದ ಬೇಟೆಗಾರ ಒಂದು ಮರವನ್ನು ಆಶ್ರಯಿಸುತ್ತಾನೆ. ಆ ಮರದಲ್ಲೊಂದು ಕಪಿ. ತನ್ನನ್ನು ಆಶ್ರಯಿಸಿದ ಬೇಡನಿಗೆ ಅದು ರಕ್ಷಣೆ ನೀಡಿತು. ಅಲ್ಲಿಗೆ ಬಂದ ಹುಲಿಯು ನಿದ್ರಿಸುತ್ತಿದ್ದ ಕಪಿಯನ್ನು ನೋಡಿ ಅದನ್ನು ಕೆಳಕ್ಕೆ ತಳ್ಳುವಂತೆ ಬೇಡನಿಗೆ ಸೂಚಿಸುತ್ತದೆ. ತನಗೆ ರಕ್ಷಣೆ ನೀಡಿದ ಕಪಿಯನ್ನೇ ಹಿಂಸಾಸಕ್ತನಾದ ಬೇಡನು ಕೆಳಗೆ ತಳ್ಳುತ್ತಾನೆ. ಕಪಿಯನ್ನು ಹಿಡಿದುಕೊಂಡ ಹುಲಿ 'ಎಂತಹ ದುಷ್ಟ ಅವನು! ರಕ್ಷಣೆ ನೀಡಿದ ನಿನ್ನನ್ನೇ ಕೊಲ್ಲಲು ನನ್ನ ಬಳಿ ಕಳುಹಿಸಿದ. ನಿನ್ನನ್ನು ಬಿಟ್ಟುಬಿಡುತ್ತೇನೆ. ಮೇಲೆ ಹೋಗಿ ಅವನನ್ನು ಕೆಳಕ್ಕೆ ತಳ್ಳು' ಎಂದು ಹೇಳಿ ಕಪಿಯನ್ನು ಕಳುಹಿಸಿತು. ಮೇಲಕ್ಕೆ ಬಂದ ಕಪಿ ಬೇಡನನ್ನು ಕೆಳಕ್ಕೆ ತಳ್ಳಲಿಲ್ಲ. ಇದು ಕಪಿ ಪಾಲಿಸಿದ ಶರಣಾಗತ ರಕ್ಷಣೆಯ ಧರ್ಮ. ನೀನಾದರೋ ಕಪಿರಾಜನಾಗಿ ಯಾಕೆ ಇದನ್ನು ತಿಳಿದುಕೊಂಡಿಲ್ಲ? ಆದ್ದರಿಂದ ಅವನು ಎಂತಹವನೇ ಆಗಿರಲಿ ಅನ್ಯಥಾ ಶರಣಂ ನಾಸ್ತಿ ಎಂದು ನನ್ನ ಬಳಿ ಬಂದಾಗ ಅವನನ್ನು ಕಾಪಾಡುವುದು ನನ್ನ ಧರ್ಮ"—ಇದು ರಾಮನು ಪಾಲಿಸಿದ ಕ್ಷಾತ್ರಧರ್ಮ.

## ಪಶ್ಚಾತ್ತಾಪಕ್ಕಿಂತ ಮಿಗಿಲಾದ ಧರ್ಮ ಬೇರೊಂದಿಲ್ಲ

ತಪ್ಪು ಮಾಡುವುದು ಮಾನವನ ಸ್ವಭಾವ. ಮಾಡಿದ ತಪ್ಪನ್ನು ಅರಿತು ತಿದ್ದಿಕೊಳ್ಳುವುದು ಮಹಾನ್ ಧರ್ಮ. 'ಪಶ್ಚಾತ್ತಾಪ' ಶಬ್ದವೇ ಅರ್ಥಪೂರ್ಣವಾಗಿದೆ. ಆಮೇಲೆ ಸಂತಾಪಪಟ್ಟು ತಿದ್ದಿಕೊಳ್ಳುವುದು. "ನಾನು ಮಾಡಿದ್ದು ತಪ್ಪು" ಎಂದು ಅರಿವಾದಾಗ ಯಾವನೂ ಮತ್ತೆ ಆ ತಪ್ಪನ್ನು ಮಾಡಲಾರ. "ಎದ್ದೇಳಪ್ಪ, ಸಾಯಂಕಾಲ ಸಂಧ್ಯಾವಂದನೆಯ ಸಮಯವಾಯ್ತು. ಏಳಪ್ಪ, ಬೇಗ ಏಳು." ಒಬ್ಬ ಕರ್ಮಠನನ್ನು ಕಲಿಪುರುಷ ಎಚ್ಚರಿಸುವ ರೀತಿ ಇದು. ಏನಾಶ್ಚರ್ಯ! ಯಾರಾದರೂ ಪುಣ್ಯಕಾರ್ಯ ಮಾಡುವುದಾದರೆ ಅದನ್ನು ಹಾಳುಗೆಡಹುವವನು ಕಲಿ. ಹಾಗಿರಲು ಕರ್ಮಠನನ್ನು ಎಬ್ಬಿಸಿ ಪುಣ್ಯಕಾರ್ಯ ಮಾಡಲು ಪ್ರಚೋದನೆ ನೀಡುತ್ತಿರುವುದು ಅಚ್ಚರಿಯೇ ಸರಿ. ಕರ್ಮಠ ಕಾರಣವನ್ನು ಕೇಳಿಯೇ ಬಿಟ್ಟ. ಆಗ ಕಲಿಪುರುಷ ಈ ರೀತಿ ಉತ್ತರಿಸಿದ : "ನಾನೇನೂ ಪುಣ್ಯ ಸಂಪಾದನೆಗಾಗಿ ನಿನ್ನನ್ನು ಎಬ್ಬಿಸಲಿಲ್ಲ. ಒಂದೊಮ್ಮೆ ನಿನ್ನನ್ನು ಎಬ್ಬಿಸದಿದ್ದರೆ ಆಮೇಲೆ ಸಹಜ ನಿದ್ರೆಯಿಂದ ಎಚ್ಚೆತ್ತ ನೀನು ಸಂಧ್ಯಾವಂದನೆಯ ಸಮಯ ಮೀರಿದ್ದಕ್ಕಾಗಿ ಪಶ್ಚಾತ್ತಾಪ ಪಡುವೆ. ಪಶ್ಚಾತ್ತಾಪದಿಂದ ನಿನಗೆ ಲಭಿಸುವ ಪುಣ್ಯ, ಸಹಜ ಸಮಯದಲ್ಲಿ ನೀನು ಮಾಡುವ ಸಂಧ್ಯಾವಂದನೆಗಿಂತಲೂ ಅಧಿಕವಾಗಿರುತ್ತದೆ. ಅದು ನಿನಗೆ ಲಭಿಸಬಾರದು. ಅದಕ್ಕಾಗಿ ನಾನು ನಿನ್ನನ್ನು ಎಚ್ಚರಿಸಿದೆ." ಹಾಗಾಗಿಯೇ, ಪಶ್ಚಾತ್ತಾಪ ಎಂಬ ಗುಣಕ್ಕೆ ಅದೆಷ್ಟು ಮಹತ್ವ!

## ಪ್ರಾಣಿದಯೆ

**ತಸ್ಯ ಪ್ರಾಣ್ಯುಪಕಾರೇಣ ಪ್ರೀತೋ ಭವತಿ ಕೇಶವಃ**—"ಪ್ರಾಣಿಗಳಲ್ಲಿ ತೋರುವ ಅನುಕಂಪದಿಂದ ಭಗವಂತನು ತೃಪ್ತನಾಗುವನು." ಅದೊಂದು ರಾಜಾಸ್ತಾನದ ಮರುಭೂಮಿ ಪ್ರದೇಶ. ಒಂಟೆಯೊಂದು ಬಾಯಾರಿಕೆಯಿಂದ ಬಳಲುತ್ತಿದೆ. ಕಾಶಿಯಲ್ಲಿ ಮಿಂದು ಗಂಗಾಜಲವನ್ನು ತುಂಬಿದ ಕೊಡಗಳನ್ನು ಹೊತ್ತು ರಾಮೇಶ್ವರದಲ್ಲಿ ಅಭಿಷೇಕ ಗೈಯುವ ಉದ್ದೇಶದಿಂದ ಸಂಪ್ರದಾಯಸ್ಥ ಮನೆತನದ ದಂಡು ಆ ದಾರಿಯಲ್ಲಿ ಸಾಗಿಬರುತ್ತಿದೆ. ಎಲ್ಲರೂ

ಒಂಟೆಯ ಪರಿಸ್ಥಿತಿಯನ್ನು ನೋಡಿದರೇ ಹೊರತು ಯಾರೂ ಅದಕ್ಕೆ ನೀರುಣಿಸುವ ಔದಾರ್ಯ ತೋರಲಿಲ್ಲ. ಕಾಶಿಯಿಂದ ಹೊತ್ತು ಕೊಂಡು ಬಂದ ಜಲವನ್ನು ಒಂಟೆಯ ಬಾಯಿಗೆ ಸುರಿದರೆ ತಮ್ಮ ಪರಿಶ್ರಮವೆಲ್ಲ ವ್ಯರ್ಥ ಎಂಬುದು ಅವರ ಭಾವನೆ. ಅವರಲ್ಲಿ ಒಬ್ಬ ಒಂಟೆಯ ಪರಿಸ್ಥಿತಿಯನ್ನು ಅರಿತ. ಒಂಟೆಯ ಹೃದಯ ಮಂದಿರದಲ್ಲೇ ರಾಮೇಶ್ವರವನ್ನು ಕಂಡ. ಕಲಶವನ್ನಿಳಿಸಿ ಒಂಟೆಯ ಬಾಯಿಗೆ ನೀರುಣಿಸಿ ತೃಪ್ತಿಪಡಿಸಿ, ತನ್ನ ಜೀವನ ಸಾರ್ಥಕ್ಯವನ್ನು ಕಂಡುಕೊಂಡ.

### ಧರ್ಮ ಸಂಕಟ

ಎಷ್ಟೋ ಸಂದರ್ಭಗಳಲ್ಲಿ ಧರ್ಮಸಂಕಟಗಳು ಎದುರಾಗುತ್ತವೆ. ಒಬ್ಬ ಕರ್ಮಠ ನದೀ ತೀರದಲ್ಲಿ ಸಂಧ್ಯಾವಂದನೆ ಮಾಡುತ್ತಿದ್ದ. ನದಿಯಲ್ಲಿ ಈಜು ಬಾರದೆ ಒಬ್ಬ ಮುಳುಗುತ್ತಿದ್ದಾನೆ. ರಕ್ಷಣೆಯು ಕರ್ಮಠನಿಗೆ ಗೊತ್ತಿದೆ. ಆದರೆ ಕೂಡಲೆ ಎದ್ದರೆ ಸಂಧ್ಯಾವಂದನೆಗೆ ಭಂಗ ಬರುತ್ತದೆ. ಹಾಗೆಂದು ಏಳದಿದ್ದರೆ ಅವನು ಮುಳುಗಿ ಸಾಯುತ್ತಾನೆ. ಇಂತಹ ಸಂದರ್ಭದಲ್ಲಿ ಏನು ಮಾಡಬೇಕು? ಇದು ಧರ್ಮಸಂಕಟ. ಸಂಧ್ಯಾವಂದನೆಯನ್ನು ಮತ್ತೆಯೂ ಮುಂದುವರಿಸಬಹುದು. ಮುಳುಗುತ್ತಿರುವವನನ್ನು ರಕ್ಷಿಸುವುದು ಆಪದ್ಧರ್ಮ. ಅವನು ಅದನ್ನು ಪಾಲಿಸಿ ಭಗವಂತನ ಕೃಪೆಗೆ ಪಾತ್ರನಾದ.

ಪಿತೃವಾಕ್ಯಪರಿಪಾಲನೆ ಧರ್ಮವೇನೋ ಸರಿ. ಆದರೆ ಪಕ್ಕದ ಕಾಂಪೌಂಡಿಗೆ ಹಾರಿ ಮರವನ್ನು ಹತ್ತಿ ತೆಂಗಿನಕಾಯಿಯನ್ನು ಕೊಯ್ದು ತರುವಂತೆ ತಂದೆಯೊಬ್ಬ ಮಗನಿಗೆ ಆಜ್ಞಾಪಿಸಿದರೆ ಮಗನಾದವನು ಅದನ್ನು ಪಾಲಿಸಬೇಕೆ? ಒಂದೊಮ್ಮೆ ಪಾಲಿಸದಿದ್ದರೆ ಧರ್ಮದೂರನಾಗುವುದಿಲ್ಲವೆ? ಇಲ್ಲ. ಇಂತಹ ಸಂದರ್ಭಗಳಲ್ಲಿ ಸಜ್ಜನರಿಗೆ ಯಾವುದು ಧಾರಕವೋ ಅದು "ಧರ್ಮ" ಎಂಬ ಧರ್ಮ ಶಬ್ದದ ಚಿಂತನೆಯನ್ನು ನಡೆಸಬೇಕು.

> ಯತ್ಕರ್ಮ ಕುರ್ವತೋಽಸ್ಯ ಸ್ಯಾತ್
> ಪರಿತೋಷೋಽಂತರಾತ್ಮನಃ ।
> ತತ್ಪ್ರಯತ್ನೇನ ಕುರ್ವೀತ ವಿಪರೀತಂ ತು ವರ್ಜಯೇತ್ ॥
>
> **ಯಾವ ಕರ್ಮ ಮಾಡುವುದರಿಂದ ಅಂತರಾತ್ಮಕ್ಕೆ ಸಂತೃಪ್ತಿ ಉಂಟಾಗುತ್ತದೊ ಅದನ್ನು ಮಾಡಬೇಕು. ಅದಕ್ಕೆ ವಿರುದ್ಧ ವಾದುದನ್ನು ತ್ಯಜಿಸಬೇಕು.**

### ಉಪಸಂಹಾರ

ಹೀಗೆ ಧರ್ಮಂ ಚರ – ಧರ್ಮವನ್ನಾಚರಿಸು ಎಂದು ಹೇಳಿದ ಉಪನಿಷತ್ತು ಧರ್ಮಾನ್ನ ಪ್ರಮದಿತವ್ಯಂ ಧರ್ಮದ ವಿಷಯದಲ್ಲಿ ತಪ್ಪುಗ್ರಹಿಕೆ ಬೇಡ ಎಂದೂ ಹೇಳಿದೆ. ಆದ್ದರಿಂದ 'ಧರ್ಮ' ಶಬ್ದದ ಅರ್ಥವನ್ನು ಚೆನ್ನಾಗಿ ಪರಿಶೀಲಿಸಿ ಯಾವುದು ಯಾವ ಸಂದರ್ಭದಲ್ಲಿ ಸಜ್ಜನರಿಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯವಾಗಿ ತೋರುವುದೋ ಅಂತಹ ಧರ್ಮವನ್ನು ಜೀವನಪೂರ್ತಿ ಪಾಲಿಸೋಣ. ಸ್ವಧರ್ಮೇ ನಿಧನಂ ಶ್ರೇಯಃ ಎಂಬ ಶ್ರೀಕೃಷ್ಣನ ನುಡಿಯಂತೆ ನಮಗೆ ವಿಹಿತವಾದ ಧರ್ಮಗಳನ್ನು ಆಚರಿಸುತ್ತ ಭಗವಂತನಿಗೆ ಸಮರ್ಪಿಸೋಣ. ಅವನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಸಮೃದ್ಧಿಯ ಬಾಳನ್ನು ನಡೆಸೋಣ.

## ಅತಿ ಬುದ್ಧಿವಂತಿಕೆ

ಇಬ್ಬರು ಸ್ನೇಹಿತರಿದ್ದರು. ಅವರಲ್ಲಿ ಒಬ್ಬನು ಬಹಳ ಬುದ್ಧಿವಂತನೂ, ನೀತಿವಂತನೂ ಆಗಿದ್ದನು. ಮತ್ತೊಬ್ಬನು ಕಿಲಾಡಿಯೂ ಲೋಭಿಯೂ ಆಗಿದ್ದನು. ಒಮ್ಮೆ ಇಬ್ಬರೂ ಕಲೆತು ವ್ಯಾಪಾರಕ್ಕೆಂದು ದೂರದೇಶಕ್ಕೆ ಹೊರಟರು. ಇಬ್ಬರೂ ಕೂಡಿ ನಾನೂರು ಚಿನ್ನದ ನಾಣ್ಯಗಳನ್ನು ಸಂಪಾದಿಸಿದರು! ಒಪ್ಪಂದದಂತೆ ಇಬ್ಬರೂ ಅದನ್ನು ಸಮವಾಗಿ ಹಂಚಿಕೊಂಡರು. ಸಂತೋಷದಿಂದ ಊರಿಗೆ ಹಿಂತಿರುಗುತ್ತಿರುವಾಗ ದಾರಿಯಲ್ಲಿಯೇ ನೀತಿವಂತನಾದ ವ್ಯಾಪಾರಿಯು ಇದ್ದಕ್ಕಿದ್ದ ಹಾಗೆ ತೀವ್ರವಾದ ಖಾಯಿಲೆಗೆ ತುತ್ತಾದನು. ತಾನು ಇನ್ನು ಬಹಳ ಕಾಲ ಜೀವಿಸಲಾರನೆಂದು ಅರಿತ ಆತನು ತನ್ನ ಸ್ನೇಹಿತನನ್ನು ಕರೆದು ಇನ್ನೂರು ಚಿನ್ನದ ನಾಣ್ಯಗಳನ್ನು ಕೊಟ್ಟು, "ನಿನಗೆ ಏನು ಬೇಕೋ ಅದನ್ನು ನನ್ನ ಪತ್ನಿಗೆ ಕೊಡು" ಎಂದು ಹೇಳುತ್ತಾ ಕೊನೆಯುಸಿರೆಳೆದನು. ದುಃಖತಪ್ತನಾಗಿ ಹಿಂದಿರುಗಿದ ಸ್ನೇಹಿತನು ತನ್ನ ಸ್ನೇಹಿತನ ಪತ್ನಿಗೆ ನಡೆದ ವೃತ್ತಾಂತವನ್ನೆಲ್ಲಾ ಕೂಲಂಕಷವಾಗಿ ತಿಳಿಸಿ,"ನಿನ್ನ ಪತಿಯ ಕೊನೆಯ ಇಚ್ಛೆಯನ್ನು ತೀರಿಸುತ್ತಿರುವೆನು" ಎಂದು ಹೇಳಿ, ಒಂದೇ ಒಂದು ಚಿನ್ನದ ನಾಣ್ಯವನ್ನು ನೀಡಿದನು. ತೀಕ್ಷ್ಣಮತಿಯಾದ ಆಕೆಗೆ ಇದರಲ್ಲಿ ಏನೋ ಕುತಂತ್ರವಿದೆಯೆಂದು ಸಂಶಯ ಬಂತು. ತಕ್ಷಣ ಆಕೆ ಆ ಹಳ್ಳಿಯ ಪಂಚಾಯಿತಿಗೆ ದೂರಿತ್ತಳು. ಆ ಊರಿನ ಪಂಚನು ಒಳ್ಳೆಯ ನ್ಯಾಯವಾದಿಯೆಂದು ಕೀರ್ತಿ ಗಳಿಸಿದ್ದನು.

ನಡೆದ ವೃತ್ತಾಂತವನ್ನೆಲ್ಲಾ ಇಬ್ಬರಿಂದಲೂ ಕೇಳಿ ತಿಳಿದ ಪಂಚನು ಲೋಭಿಯಾದ ವ್ಯಾಪಾರಿಯನ್ನು ಕುರಿತು "೧೯೯ ಚಿನ್ನದ ನಾಣ್ಯಗಳನ್ನು ಆಕೆಗೆ ನೀಡು" ಎಂದು ತನ್ನ ತೀರ್ಪನ್ನಿತ್ತನು. ಅವಾಕ್ಕಾದ ಆ ಲೋಭಿಯು, "ನನ್ನ ಸ್ನೇಹಿತನ ಕೊನೆಯಾಸೆಯನ್ನು ನಾನು ಸರಿಯಾಗಿ ನೆರವೇರಿಸಿರುವೆ" ಎಂದನು. ಪಂಚನು ತನ್ನ ತೀರ್ಪಿನ ಹಿಂದಿರುವ ಯುಕ್ತಿಯನ್ನು ವಿವರಿಸಿ ಹೇಳಿದನು : "ಹೌದು, ನಿನ್ನ ಸ್ನೇಹಿತನ ಮಾತಿನಂತೆ ನಡೆಯಬೇಕೆಂದೇ ಹೇಳುತ್ತಿರುವುದು. ಒಂದು ನಾಣ್ಯ ಆಕೆಗೆ ಇತ್ತು, ೧೯೯ ನಾಣ್ಯಗಳನ್ನು ನಿನಗಾಗಿ ಉಳಿಸಿಕೊಂಡೆ. ಅದರರ್ಥ ನಿನಗೆ ೧೯೯ ನಾಣ್ಯ ಬೇಕೆಂದು ಆಯಿತು. ಅದನ್ನೇ ಆಕೆಗೆ ನೀಡಬೇಕು ಎಂದು ನಿನ್ನ ಸ್ನೇಹಿತ ಹೇಳಿರುವುದಲ್ಲವೇ?"

ಪಂಚನ ಈ ಬುದ್ಧಿವಂತಿಕೆಯ ತೀರ್ಪಿಗೆ ಜನರೆಲ್ಲಾ ತಲೆದೂಗಿದರೆಂದು ಹೇಳಬೇಕಾಗಿಲ್ಲ. ಪೆಚ್ಚುಮೋರೆಯ ಲೋಭಿಯು ೧೯೯ ನಾಣ್ಯಗಳನ್ನು ಒಪ್ಪಿಸಿ ಹಿಂದಿರುಗಿದನು. ಪರರಿಗೆ ದ್ರೋಹ ಬಗೆಯಲು ಹೋದರೆ ತನಗೇ ಕೇಡಾಗುವುದು. ಸ್ವಾರ್ಥಿಗಳ ಅತಿ ಜಾಣತನವೂ ಅವರಿಗೇ ಮೃತ್ಯುವಾಗುವುದು. (ಆಧಾರ : *You don't have to be sick to get Better*)